ಕರೆಯಿಸಿ ಅವರು ಅಲ್ಲಿ ಎದುರಿಸತಕ್ಕಂಥ ಸಂಕಟಗಳನ್ನು ಅರಿತುಕೊಂಡು ಅವುಗಳನ್ನು ಬಗೆಹರಿಸುವಲ್ಲಿ ತತ್‌ಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಅರಿಕೆ.

ಅಧ್ಯಕ್ಷರು:- ಅವರನ್ನು ಇಲ್ಲಿಗೆ ಕರೆಸುವುದು ಬೇಡ. ಅಧಿವೇಶನ ಮುಗಿದ ಮೇಲೆ ಸಚಿವರು ಸಕಲೇಶಪುರಕ್ಕೆ ಬರುವ ಹಾಗೆ ಮಾಡೋಣ.

ಶ್ರೀ ಮಿರಾಜುದ್ದೀನ್ ಎನ್.ಪಟೇಲ್:- ಮಾನ್ಯ ಅಧ್ಯಕ್ಷರೇ, ಸಕಲೇಶಪುರಕ್ಕೆ ಹೋಗಿ ಖುದ್ದಾಗಿ ಸಮಸ್ಯೆಗಳನ್ನು ನೋಡಿ ಬಗೆಹರಿಸುತ್ತೇನೆ. ಅಂತೆಯೇ ಮಾನ್ಯ ಸದಸ್ಯರನ್ನು ಅಲ್ಲಿ ಭೇಟಿ ಮಾಡಿ ಅವರೊಂದಿಗೆ ಡಿಸ್‌ಕಸ್ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ವಿಷಯ:- ಹೊಸಪೇಟೆ ನಗರದ ಕುಡಿಯುವ ನೀರು ಯೋಜನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 144 (1060)

ಶ್ರೀ ಜಿ.ಶಂಕರಗೌಡ (ಹೊಸಪೇಟೆ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸಪೇಟೆ ನಗರವು ಎರಡುವರೆ ಲಕ್ಷ ಜನ ಸಂಖ್ಯೆ ಮೀರಿದ್ದು ಈಗಿರುವ ನೀರಿನ ವ್ಯವಸ್ಥೆ ಸಾಲದಾಗಿದ್ದು ಕುಡಿಯುವ ನೀರಿನ ಅವ್ಯವಸ್ಥೆಯಿಂದ ತೊಂದರೆಗೀಡಾಗಿರುವುದು ಸರ್ಕಾರದವರ ಗಮಕ್ಕೆ ಬಂದಿದೆಯೇ?

ಆ) ಎರಡನೇ ಹಂತದ ಯೋಜನೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಇ) ಸದರಿ ಯೋಜನೆಯಲ್ಲಿ ತೊಡಗಿಸಿದ ಹಣವೆಷ್ಟು?

ಈ) ಎಷ್ಟು ಕಾಲಾವಕಾಶದಲ್ಲಿ ಸದರಿ ಯೋಜನೆಯನ್ನು ಪೂರ್ಣಗೊಳಿಸಲಾಗುವುದು?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಬಂದಿದೆ.

ಆ) ಹೊಸಪೇಟೆ ಪಟ್ಟಣದ ಸಮಗ್ರ ನೀರು ಸರಬರಾಜು ಯೋಜನೆ ರೂ.250 ಲಕ್ಷಗಳಿಗೆ ಸರ್ಕಾರವು ಆದೇಶ ಸಂಖ್ಯೆ:ವನಇ 24 ಯುಎಂಎಸ್ 85, ದಿ:27-4-1988ರಲ್ಲಿ ಮಂಜೂರಾತಿ ಕೊಟ್ಟಿದೆ. ಈ ಯೋಜನೆಯು ಈಗ ಪ್ರಗತಿಯಲ್ಲಿದೆ.

ಇ) ಈ ಯೋಜನೆಗೆ ಕೆಳಕಂಡಂತೆ ಹಣಕಾಸು ಸಂಸ್ಥೆಗಳಿಂದ ತೊಡಗಿಸಲು ವ್ಯವಸ್ಥೆ ಮಾಡಲಾಗಿದೆ.

1. ಭಾರತೀಯ ಜೀವ ವಿಮಾ ನಿಗಮದಿಂದ ಸಾಲ	ರೂ. 125.00
2. ಸರ್ಕಾರದಿಂದ ಸಾಲ	ರೂ. 75.00
3. ಪುರಸಭೆಯಿಂದ ವಂತಿಕೆ	ರೂ. 50.00
ಒಟ್ಟು	ರೂ. 250.00 ಲಕ್ಷಗಳು

ಈ ಪೈಕಿ ಇದುವರೆಗೆ ಆಗಿರುವ ಕೆಲಸಗಳಿಗೆ ರೂ. 144.80 ಲಕ್ಷಗಳು ಖರ್ಚಾಗಿರುತ್ತದೆ.

ಈ) ಸದರಿ ಯೋಜನೆಯನ್ನು ಡಿಸೆಂಬರ್ 1997ರೊಳಗೆ ಚಾಲು ಮಾಡಿ ಜೂನ್ 1998ರ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ಜಿ.ಶಂಕರಗೌಡ:- ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ಅವರು ಕೊಟ್ಟ ಉತ್ತರವು ಅಷ್ಟು ಸಮಂಜಸವಾಗಿಲ್ಲ ಎಂದು ಹೇಳಬಯಸುತ್ತೇನೆ. 1988ರಲ್ಲಿ 250 ಲಕ್ಷ ರೂ.ಗಳಿಗೆ ಈ ಕುಡಿಯುವ ನೀರಿನ ಯೋಜನೆಗೆ ಮಂಜೂರಾತಿಯನ್ನು ಕೊಡಲಾಗಿತ್ತು. ಈಗ 1998ಕ್ಕೆ ಈ ಯೋಜನೆಯನ್ನು ಪೂರ್ಣಗೊಳಿಸುತ್ತೇವೆಂದು ಹೇಳುತ್ತಾ ಇದ್ದಾರೆ. ಆದರೆ ಇಲ್ಲಿಯವರೆಗೆ ಕೇವಲ 14 ಲಕ್ಷ ರೂ.ಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಈ ಹತ್ತು ವರ್ಷಗಳ ಅವಧಿಯಲ್ಲಿ ಈ ಯೋಜನೆಯ ವೆಚ್ಚವು ಇನ್ನೂ ಹೆಚ್ಚಾಗಲಿದ್ದು ನಿಗದಿತ 250 ಲಕ್ಷ ರೂ.ಗಳಲ್ಲಿಯೇ ಈ ಕಾರ್ಯಕ್ರಮ ಮುಗಿಯುತ್ತದೆಯೇ? ಎಂಬುದನ್ನು ಹೇಳಬೇಕು. ಒಂದು ವೇಳೆ ಹೆಚ್ಚಾದಲ್ಲಿ ಸರಕಾರದವರು ಈ ಕುರಿತು ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಸಭಾಧ್ಯಕ್ಷರೇ, ಹೊಸಪೇಟೆ ಪಟ್ಟಣಕ್ಕೆ ನೀರನ್ನು ಕೊಡುವ ಯೋಜನೆಯು ಬಹಳ ತಡವಾಗಿದೆಯೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದು ಒಂದು ರೀತಿಯಲ್ಲಿ ಆಮೆವೇಗದಲ್ಲಿ ಹೋಗಿದೆ. ಇದಕ್ಕೆ 250 ಲಕ್ಷ ರೂ.ಗಳ ಮಂಜೂರಾತಿ ಇದ್ದು 4 ಓವರ್‌ಹೆಡ್ ಟ್ಯಾಂಕ್‌ಗಳನ್ನು ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಶನ್‌ಗೆ ಕೊಟ್ಟಿತು. ಇದರಲ್ಲಿ ಎರಡು ಮುಗಿದಿದ್ದು ಇನ್ನೂ ಎರಡು ಉಳಿದಿದೆ. ಆ ಏಜನ್ಸಿಯನ್ನು ಬೇರೆಯವರಿಗೆ ಕೊಡಲು ಈಗಾಗಲೇ ಟೆಂಡರನ್ನು ಕರೆದಿದ್ದೇವೆ. ಹಾಗೆಯೇ ಟ್ರೀಟ್‌ಮೆಂಟ್ ಪ್ಲಾಂಟನ್ನು ಹೊಸದಾಗಿ ಮಾಡಬೇಕೆನ್ನುವ ದೃಷ್ಟಿಯಿಂದ ಅದಕ್ಕೂ ಕೂಡ ಟೆಂಡರ್ ಕರೆದು ಏಜನ್ಸಿ ಈಗಾಗಲೇ ಫಿಕ್ಸ್ ಆಗಿದೆ. ಅಂತೆಯೇ ಮಾನ್ಯ ಸದಸ್ಯರು ಈ ಯೋಜನೆಗೆ ತಗಲುವ ಜಾಸ್ತಿ ಹಣವನ್ನು ಏನು ಮಾಡುತ್ತೀರಿ ಎಂದು ಕೇಳಿದ್ದಾರೆ. 1996-97ರಲ್ಲಿ ಈ ಸಾರಿ ಒಂದು ಕೋಟಿ ಹಣವನ್ನು ಅದಕ್ಕೆ ತೆಗೆದಿರಿಸಿದ್ದೇವೆ. 1996ರ ಮಧ್ಯೆ ಜೂನ್ ತಿಂಗಳ ಹೊತ್ತಿಗೆ ಈ ಕೆಲಸವನ್ನು ಸಂಪೂರ್ಣವಾಗಿ ಮುಗಿಸುತ್ತೇವೆ.

ಶ್ರೀ ಜಿ.ಶಂಕರಗೌಡ:- ಒಳಚರಂಡಿ ಯೋಜನೆಯನ್ನು ಮುನಿಸಿಪಾಲಿಟಿಯವರೇ

ವಹಿಸಿಕೊಳ್ಳುತ್ತಾರೆಂದು ಇತ್ತೀಚೆಗೆ ಸರ್ಕಾರ ಆಜ್ಞೆ ಹೊರಡಿಸಿದೆ. ಆದರೆ ಅವರು ವಹಿಸಿಕೊಂಡಿಲ್ಲ ಇದರಿಂದ ಅಲ್ಲಲ್ಲಿ ಒಳಚರಂಡಿ ಪೈಪುಗಳು ಒಳಗೊಳಗೇ ಬರ್‌ಸ್ಟ್ ಆಗಿ ಹೊಲಸೆಲ್ಲ ಮೇಲೆ ಬಂದು ಜನರಿಗೆ ಬಹಳ ತೊಂದರೆಯಾಗಿದೆ. ಅದರ ಬಗ್ಗೆ ಸರ್ಕಾರ ಆದಷ್ಟು ಗಮನಹರಿಸಬೇಕು.

ಶ್ರೀ ಬಿ.ಎನ್.ಬಚ್ಚೇಗೌಡ:- ಅದನ್ನು ಪರೀಕ್ಷೆ ಮಾಡಿ ಕ್ರಮ ಕೈಗೊಳ್ಳುತ್ತೇನೆ.

ವಿಷಯ:- ಜೆಮ್ಸ್ ಕಟಿಂಗ್ ಯೂನಿಟ್‌ಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 145 (1156)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ):- ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಾಂಡವಪುರ ತಾಲೂಕಿನಲ್ಲಿ ಎಷ್ಟು ಜೆಮ್ಸ್ ಕಟಿಂಗ್ಸ್ ಯೂನಿಟ್‌ಗಳಿವೆ, ಈ ಯೂನಿಟ್‌ಗಳಿಗೆ ಕೆ.ಎಸ್.ಐ.ಸಿ.ಯಿಂದ ಸಾಲ ಕೊಡಲಾಗಿದೆಯೇ?

ಆ) ಈ ಯೂನಿಟ್‌ಗಳಲ್ಲಿ ''ರಾ-ಮೆಟಿರಿಯಲ್ಸ್'' ಇಲ್ಲದೆ ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಇದನ್ನು ಸರಿಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಎ.ಮೊಹಿದೀನ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):-

ಅ) 3 ಜೆಮ್ಸ್ ಕಟಿಂಗ್ಸ್ ಘಟಕಗಳಿವೆ. ಈ ಎಲ್ಲಾ ಘಟಕಗಳಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಸಾಲ ನೀಡಿರುತ್ತದೆ.

ಆ) ಹೌದು. ಇದರ ಬಗ್ಗೆ ದಿನಾಂಕ 10-6-96ರಂದು ನಡೆದ 6ನೇ ಸಲಹಾ ಸಮಿತಿಯ ಸಭೆಯಲ್ಲಿ ಚರ್ಚಿಸಿದ್ದು ಈ ಘಟಕಗಳಿಗೆ ಅವಶ್ಯವಿರುವಷ್ಟು ಕಚ್ಚಾಮಾಲನ್ನು ಸರಬರಾಜು ಮಾಡುವುದಾಗಿ ಡಿ.ಜಿ.ಡಿ.ಸಿ ಅಧ್ಯಕ್ಷರು ಸಮಿತಿಯ ಸಭೆಯಲ್ಲಿ ಒಪ್ಪಿಕೊಂಡಿರುತ್ತಾರೆ. ಪ್ರಸ್ತುತ ಎಲ್ಲಾ ಘಟಕಗಳು ಕೆಲಸ ನಿರ್ವಹಿಸುತ್ತಿರುತ್ತವೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಅಧ್ಯಕ್ಷರೇ, ಈಗಾಗಲೇ ಜಮ್ ಕಟಿಂಗ್ ಯೂನಿಟ್‌ಗಳ ಪಾಂಡವಪುರದಲ್ಲಿ, ಕ್ಯಾತನಹಳ್ಳಿ ಹಾಗೂ ಚಿಕ್ಕಾಣಿಗಳಲ್ಲಿ ಮೂರು ಘಟಕಗಳಿವೆ. ರಾಜ್ಯದ ತುಂಬೆಲ್ಲ ಇದೆ. ಆದರೆ ಸ್ಥಿತಿ ಏನಾಗಿದೆ ಎಂದರೆ ಒಂದು ತಿಂಗಳಲ್ಲಿ 15 ದಿವಸ ಮಾತ್ರ ಕೆಲಸ ಸಿಗುತ್ತದೆ, ಇನ್ನು ಹದಿನೈದು ದಿವಸ ಕೆಲಸ ಇಲ್ಲ. ಕೆಎಸ್‌ಎಫ್‌ಸಿಯವರು ಪಾಲಿಶಿಂಗ್ ಮೆಶಿನ್‌ಗೆ ಸಾಲ ಕೊಟ್ಟಿದ್ದಾರೆ. ಆ ಸಾಲದ ಮೆಲೆ ಬಡ್ಡಿ ಬೆಳೆಯುತ್ತಿದೆ. ಇವರ ದಿನನಿತ್ಯದ ದುಡಿಮೆ ಹಣ ಜೀವನಕ್ಕೆ ಆಗದಿರುವಂತಹ ಪರಿಸ್ಥಿತಿ ಸುಮಾರು 12 ವಿಚಾರಗಳಿವೆ ಅದನ್ನು ನಿಮಗೆ ಕಳಿಸಿಕೊಡುತ್ತೇನೆ, ನನ್ನದೊಂದು ಸಲಹೆ ಏನಂದರೆ ಇದು ಬಹಳ ಗಂಭೀರವಾದ ವಿಷಯ, ಅದರಲ್ಲೂ ವಿಶೇಷವಾಗಿ ಹೆಣ್ಣುಮಕ್ಕಳಿಗೆ ಉದ್ಯೋಗ